'ಇರಬಹುದು. ಆದರೆ ನಾನು ಆಮಿಷಗಳಿಗೆ ಒಳಗಾಗಲಾರೆ.'

'ಮತ್ತೆ ನಿಮ್ಮ ದುರ್ಯೋಧನನಿಗೆ ಇನ್ಯಾವ ಉದ್ದೇಶವಿತ್ತು? ಅವನು ನಿಮ್ಮ ಜತೆ ಸ್ನೇಹ ಬೆಳೆಸಿದ್ದು ಅವನ ಸ್ವಾರ್ಥಕ್ಕಾಗಿ! ಹುಟ್ಟಿನಿಂದಲೂ ಅವನು ಪಾಂಡವದ್ವೇಷಿ. ಅವನಿಗೆ ಅರ್ಜುನನನ್ನು ಕೊಲ್ಲುವಂತಹ ಮಹಾವೀರನೊಬ್ಬ ಬೇಕಾಗಿದ್ದ. ಆಗ ನಿಧಿಯಂತೆ ನೀವು ಸಿಕ್ಕಿದಿರಿ. ಬಿಟ್ಟಾನೆಯೇ? ಎಂದು ಹಸ್ತಿನಾಪುರದ ತುಂಬೆಲ್ಲ ಪ್ರಜೆಗಳು ಮಾತಾಡಿಕೊಳ್ಳುತ್ತಿದ್ದಾರಂತಲ್ಲ!'

'ಅರ್ಜುನನನ್ನು ಕೊಲ್ಲುವುದು ಬಿಡುವುದು ನಂತರದ ಮಾತು. ಆದರೆ ಕೃಷ್ಣನ ಪ್ರಲೋಭವನ್ನು ತಿರಸ್ಕರಿಸುವುದಕ್ಕೆ ಇದಕ್ಕಿಂತ ಬಲವಾದ ಇನ್ನೊಂದು ಕಾರಣವಿತ್ತು.'

'ಏನದು ಅಂತಹ ಕಾರಣ?'

'ಕೇಳುತ್ತೀಯಾ– ಎದೆಗಟ್ಟಿ ಮಾಡಿಕೋ– ಕೃಷ್ಣನ ಮಾತಿಗೆ ನಾನು 'ಹೂಂ' ಅಂದಿದ್ದರೆ ಅದರ ಪ್ರಯೋಜನಗಳು ದಕ್ಕುತ್ತಿದ್ದುದು ನನ್ನೊಬ್ಬನಿಗೆ ಮಾತ್ರ. ನೀನು ಸೂತಕುಲದವಳಾದುದರಿಂದ ನಿನಗೆ ಪಟ್ಟದ ರಾಣಿಯಾಗುವ ಯೋಗವಿಲ್ಲ. ದ್ರೌಪದಿ ಆ ಸ್ಥಾನ ತುಂಬುತ್ತಿದ್ದಳು. ಹಾಗೆಯೇ ನಮ್ಮ ಮಕ್ಕಳೆಲ್ಲರೂ ಕುರುರಾಜ ಕುಮಾರರು ಎಂಬ ಹಕ್ಕಿನಿಂದ ವಂಚಿತರಾಗಿ ಸೂತರಾಗಿಯೇ ಉಳಿದುಬಿಡುತ್ತಾರೆ. ನನ್ನ ನಂತರ ಹಸ್ತಿನಾಪುರದ ಸಿಂಹಾಸನ ಪಾಂಡವರಲ್ಲಿ ಯಾರೋ ಒಬ್ಬರಿಗೆ ಅಥವಾ ಅವರ ಮಕ್ಕಳಿಗೆ ದಕ್ಕಿಬಿಡುತ್ತದೆ...'

'....'

'ನಾನೊಬ್ಬನೇ ರಾಜಯೋಗವನ್ನು ಅನುಭವಿಸುವಷ್ಟು ಸ್ವಾರ್ಥಿಯಾಗಲಾರೆ ವೃಷಾಲಿ, ಒಂದುವೇಳೆ ನನ್ನೊಂದಿಗೆ ನಿಮ್ಮೆಲ್ಲರಿಗೂ ಕ್ಷತ್ರಿಯತ್ವ ದೊರಕುವ ಹಾಗಿದ್ದಿದ್ದರೆ ನಾನು ಖಂಡಿತ ಸಂತೋಷದಿಂದ ಕೃಷ್ಣನ ಮಾತಿಗೆ ಒಪ್ಪುತ್ತಿದ್ದೆ. ಹೀಗೆ ನಿಮ್ಮಲ್ಲಿ ಯಾರಿಗೂ ಉಪಯೋಗವಾಗದ ಈ ಸತ್ಯದಿಂದ ನನಗಾದರೂ ಏನು ಪ್ರಯೋಜನ! ಇದೆಲ್ಲ ಯೋಚಿಸಿಯೇ ನಾನು ಪಾಂಡವನೆನಿಸಿಕೊಳ್ಳಲು ನಿರಾಕರಿಸಿದ್ದು.' ಅಪ್ಪ ತನ್ನ ಅಂತರಂಗವನ್ನು ಬಯಲು ಮಾಡಿದ್ದ.

ಕೇಳಿ ನಮ್ಮೆಲ್ಲರ ಉತ್ಸಾಹ ನೀರಗುಳ್ಳೆಯಂತೆ ಒಡೆದು ಹೋಯಿತು. ಇದರಲ್ಲಿ ಅಪ್ಪನ ತಪ್ಪೇನೂ ಇರಲಿಲ್ಲ. ಆದರೆ ಅವನಿಂದ ನಮ್ಮೆಲ್ಲರ ಭಾಗ್ಯದ ಬಾಗಿಲು ತೆರೆಯುವುದು ಸಾಧ್ಯವಿರಲಿಲ್ಲ ಅಷ್ಟೇ. ಆದರೂ ಅಪ್ಪನ ನಿಸ್ವಾರ್ಥ ಧೋರಣೆ ಕಂಡು ನಮ್ಮಲ್ಲಿ ಇನ್ನಷ್ಟು ಅಭಿಮಾನ, ಪ್ರೀತಿ ಉಕ್ಕಿತು.

★★★

ವೃಷಕೇತುವಿನ ವಿವರಣೆ ಕೇಳಿ ಯುಯುತ್ಸು ಸ್ವಲ್ಪ ಹೊತ್ತು ವಿಷಾದದಿಂದ ಕಳವಳಿಸುವಂತೆ ಕಂಡ. ನಂತರ ಚೇತರಿಸಿಕೊಂಡವನಂತೆ ಹೇಳಿದ: 'ಒಂದು ವೇಳೆ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರೇ ಸೋತೋ, ಸತ್ತೋ ಹೋಗಿ ಹಸ್ತಿನಾಪುರ ಸಾಮ್ರಾಜ್ಯ ದುರ್ಯೋಧನನ ಕೈವಶವಾಗಿದ್ದರೆ ಆಗ ನಿನ್ನ ತಂದೆಯ ಸ್ಥಾನಮಾನ ಏನಾಗುತ್ತಿತ್ತು?'

'ಏನಾಗುತ್ತಿತ್ತು?'

'ಅರ್ಜುನನ ಸಾವಿಗಾಗಿ ಕಾತರಿಸಿದ ದುರ್ಯೋಧನನಿಗೆ ಅಷ್ಟರಮಟ್ಟಿಗೆ ನಿನ್ನ ತಂದೆ ಬೇಕಾಗಿದ್ದ. ಅರ್ಜುನ ಸತ್ತಮೇಲೆ?...'

'ಆಗಲೂ....'

'ಊಹುಂ. ನನಗೆ ದುರ್ಯೋಧನನ ಗುಣಾವಗುಣಗಳನ್ನು ಹತ್ತಿರದಿಂದ ನೋಡಿ ಗೊತ್ತಿದೆ. ಆದ್ದರಿಂದ ಹೇಳುತ್ತಿದ್ದೇನೆ. ಆ ಮೇಲೆ ಅವನಿಗೆ ನಿನ್ನ ತಂದೆಯ ಬಗ್ಗೆ ಹೇಳಿಕೊಳ್ಳುವಂತಹ ಆದರಾಭಿಮಾನ ಉಳಿಯುತ್ತಿರಲಿಲ್ಲ. ಆಗ ನಿನ್ನ ತಂದೆ ಉಳಿಗದವನಾಗಿ ಉಳಿಯಬೇಕಾಗುತ್ತಿತ್ತು.